Kerala Gazette No. 37 dated 21st September 2021.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಎ) ಇಲಾಖೆ

## ಅಧಿಸೂಚನೆ

ನಂಬ್ರ 3111(2)/ಲೆಗ್. ಎ2/2018/ಕಾನೂನು. *ತಿರುವನಂತಪುರಂ,* *2018 ಮಾರ್ಚ್ 31,*
*1193 ಮೀನ 17/*
*1940 ಚೈತ್ರ 10.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2018 ಮಾರ್ಚ್ 31ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

2018ರ 6ನೇ ಅಧಿನಿಯಮ

## 2018ರ ಕೇರಳ ಆರ್ಥಿಕ (2ನೇ ನಂಬ್ರ) ಅಧಿನಿಯಮ

2018-2019ನೇ ಆರ್ಥಿಕ ವರ್ಷಕ್ಕಿರುವ ಕೇರಳ ಸರಕಾರದ ಕೆಲವು ಆರ್ಥಿಕ ಪ್ರಸ್ತಾವನೆಗಳಿಗೆ ಪ್ರಾಬಲ್ಯ ನೀಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2018-2019ನೇ ಆರ್ಥಿಕ ವರ್ಷಕ್ಕಿರುವ ಕೇರಳ ಸರಕಾರದ ಕೆಲವು ಆರ್ಥಿಕ ಪ್ರಸ್ತಾವನೆಗಳಿಗೆ ಪ್ರಾಬಲ್ಯ ನೀಡುವುದಕ್ಕಾಗಿ 2003ರ ಕೇರಳ ಸರಕಾರಿ ಖಾತರಿಗಳ ಗರಿಷ್ಠ ಪರಿಮಿತಿ ಅಧಿನಿಯಮವನ್ನು ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಕೇರಳ ಆರ್ಥಿಕ (2ನೇ ನಂಬ್ರ) ಅಧಿನಿಯಮವೆಂದು ಕರೆಯಬಹುದು.

(2) ಇದು 2018 ಏಪ್ರಿಲ್ 1ನೇ ದಿನಾಂಕದಂದು ಜಾರಿಗೆ ಬರುವುದಾಗಿದೆ.

2. 2003ರ 30ನೇ ಅಧಿನಿಯಮದ ತಿದ್ದುಪಡಿ.—2003ರ ಕೇರಳ ಸರಕಾರಿ ಖಾತರಿಗಳ ಗರಿಷ್ಠ ಪರಿಮಿತಿ ಅಧಿನಿಯಮ (2003ರ 30)ದ 3ನೇ ವಿಭಾಗದಲ್ಲಿ "ಇಪ್ಪತ್ತೊಂದು ಸಾವಿರ ಕೋಟಿ ರೂಪಾಯಿಗಳು" ಎಂಬ ಪದಗಳ ಬದಲು "ರಾಜ್ಯ ಆರ್ಥಿಕ ಹಾಗೂ ಅಂಕಿ ಅಂಶಗಳ ಇಲಾಖೆಯು, ಆಯಾಯ ಆರ್ಥಿಕ ವರ್ಷಕ್ಕೆ ಲೆಕ್ಕ ಹಾಕುವ ರಾಜ್ಯದ ಒಟ್ಟು ರಾಜ್ಯ ಆಂತರಿಕ ಉತ್ಪಾದನೆಯ ಐದು ಶೇಕಡಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

---



Salim A Digitally signed by Salim A
Date: 2021.09.30 21:04:07
+05'30'